ಪೂರ್ಣವಾಗಿ ಹಾಗೂ 362 ಮನೆಗಳು ಭಾಗಶಃ ಹಾನಿಗೊಳಗಾಗಿವೆ.

ಆ) ಒಟ್ಟು 5124 ಮನೆಗಳಿಗೆ ಹಾನಿಯಾಗಿದ್ದು, ನಷ್ಟ ರೂ 3.93 ಲಕ್ಷ ಎಂದು ಅಂದಾಜಿಸಲಾಗಿದೆ.

ಇ) ಸಮುದ್ರ ಕೊರೆತದಿಂದ ಭೀತಿಗೊಳಗಾದ ಜನರಿಗೆ ಉಳ್ಳಾಲದಲ್ಲಿ ಗಂಜಿ ಕೇಂದ್ರವನ್ನು ತೆರೆದು ನಿರ್ವಹಿಸಿಲಾಗಿದೆ. ಅಲ್ಲದೆ ಮನೆ ದುರಸ್ತಿ ಬಗ್ಗೆ ಸರ್ಕಾರದ ಮಾರ್ಗಸೂಚಿ ಅನುಸಾರ ಎಲ್ಲಾ 124 ಪ್ರಕರಣಗಳಲ್ಲಿ ಒಟ್ಟು ರೂ 2.29 ಲಕ್ಷ ಪರಿಹಾರ ಧನವನ್ನು ಜಿಲ್ಲಾಧಿಕಾರಿಗಳು, ದಕ್ಷಿಣಕನ್ನಡ ಜಿಲ್ಲೆ ಇವರು ಮಂಜೂರು ಮಾಡಿರುತ್ತಾರೆ.

ವಿಷಯ : ರಾಜ್ಯದಲ್ಲಿ ಹೊಸ ಸರ್ವೆ ಕೆಲಸದ ಪ್ರಾರಂಭ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 550 (28)

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿಯಿರುವ ಭೂ ಅಳತೆ ಮತ್ತು ಸರ್ವೆ ಕೆಲಸಗಳು ಎಷ್ಟು ಹಿಂದಿನದು.

ಆ) ಹೊಸ ಸರ್ವೆ ಕೆಲಸ ಪ್ರಾರಂಭಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ.

ಇ) ಹೊಸ ಜಮೀನುಗಳ ಹಳೇ ಸರ್ವೆ ನಂಬರ್‌ಗಳಲ್ಲಿ ವ್ಯತಿರಿಕ್ತವಾಗಿ ಗುರುತಿಸಲ್ಪಟ್ಟಿರುವುದರಿಂದ ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):-

ಅ) 105 ವರ್ಷಗಳಷ್ಟು ಹಿಂದಿನವು.

ಆ) ಹೌದು.

ಇ) ಹಿಂದಿನ ಇನಾಂ ಗ್ರಾಮಗಳಲ್ಲಿ ಮಾತ್ರ ವ್ಯತ್ಯಾಸವಾಗಿರುವುದು ಗಮನಕ್ಕೆ ಬಂದಿದೆ.

ವಿಷಯ:- ಹುಬ್ಬಳ್ಳಿ ಗ್ರಾಮಿಣ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಕ್ಕೆ ಕಟ್ಟಡ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 552 (702)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ?

2. ಇವುಗಳಲ್ಲಿ ಕಟ್ಟಡಗಳಿರುವ ಅಂಗನವಾಡಿಗಳು ಎಷ್ಟು? ಹಾಗೂ ಎಷ್ಟು ಬಾಡಿಗೆ ಕಟ್ಟಡಗಳಲ್ಲಿವೆ?

3. ಹಾಗಿದ್ದಲ್ಲಿ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು?

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):-

ಅ) ಹುಬ್ಬಳ್ಳಿ ಗ್ರಾಮೀಣ ಕೇತ್ರದಲ್ಲಿ 65 ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 56 ಕೇಂದ್ರಗಳಿಗೆ ಕಟ್ಟಡಗಳಿವೆ. ಆದರೆ, ಕೇವಲ 4 ಕಟ್ಟಡಗಳು ಮಾತ್ರ ಸರ್ಕಾರದ್ದು, 52 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ ಉಳಿದ 52 ಕೇಂದ್ರಗಳು ಶಾಲಾ ಕಟ್ಟಡಗಳಲ್ಲಿ ಸಮೂದಾಯ ಭವನಗಳಲ್ಲಿ, ಪಂಚಾಯತ್ ಕಟ್ಟಡಗಳಲ್ಲಿ ನಡೆಯುತ್ತಿವೆ.

ಇ) 1996-97ನೇ ಸಾಲಿನಲ್ಲಿ 19 ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಕಾಲಾನುಕ್ರಮದಲ್ಲಿ ಸೂಕ್ತ ಕಟ್ಟಡ ಇಲ್ಲದ ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವನ್ನು ಒದಗಿಸಲು ಉದ್ದೇಶಿಸಲಾಗಿದೆ.

ವಿಷಯ:- ಚಿಕ್ಕನಹಳ್ಳಿ ಕೃಷಿ ಬಿಜೋತ್ಪಾದನಾಕೇಂದ್ರದಲ್ಲಿ ಕೃಷಿ ತರಬೇತಿ ಭತ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 553 (697)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿಯಲ್ಲಿ ಕೃಷಿ ಬೀಜೋತ್ಪಾದನಾ ಕೇಂದ್ರ ಕೃಷಿ ತರಬೇತಿ ಕೇಂದ್ರ ಮತ್ತು ರೈತರ ತರಬೇತಿ ಕೇಂದ್ರಗಳಲ್ಲಿನ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಭತ್ಯೆಯಾಗಿ ರೂ. 15 ಮತ್ತು 25ರೂ ಸಂದಾಯ ಮಾಡುತ್ತಿರುವುದು ನಿಜವೆ.

ಆ) ಈ ತರಬೇತಿದಾರರಿಗೆ ಈಗ ನೀಡುತ್ತಿರುವ ರೂ. 15 ಮತ್ತು 25ರೂ ಹಣ ಸಾಲದೆ ನಿಗದಿತ ವೇಳೆಗಿಂತ ಮುಂಚೆಯೇ ತರಬೇತಿ ಅವಧಿಯನ್ನು ಕಡಿತಗೊಳಿಸುತ್ತಿರುವುದು ನಿಜವೇ: